# ಜೇಠ್ಮಲಾನಿ: ವಕಾಲತ್ತಿಗೆ ನಮಸ್ಕಾರ

ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಹೊಂದಿರುವ ಪ್ರಖ್ಯಾತ ವಕೀಲ, ರಾಮ್ (ಬೂಲ್‌ಚಂದ್) ಜೇಠ್ಮಲಾನಿ ವಕೀಲ ವೃತ್ತಿಯಿಂದ ನಿವೃತ್ತರಾಗಿದ್ದಾರೆ. 94ರ ಹರೆಯದಲ್ಲಿ (ಬರ್ತ್‌ಡೇ 14/9/1923) ವೃತ್ತಿಯಿಂದ ನಿವೃತ್ತರಾಗುವುದು ವಿಶೇಷವೇ. ಅದರಲ್ಲೂ ವಕೀಲರಾಗಿ ಸುಮಾರು 76 ವರ್ಷಗಳ ಅಪಾರ ಅನುಭವ ಹೊಂದಿರುವುದು ಒಂದು ದಾಖಲೆಯೇ. 'ವೃತ್ತಿಯಿಂದ ನಿವೃತ್ತನಾಗಿದ್ದೇನೆ, ಆದರೆ ಭ್ರಷ್ಟಾಚಾರದ ವಿರುದ್ಧ ನನ್ನ ಹೋರಾಟವನ್ನು ಮುಂದುವರಿಸುತ್ತೇನೆ' ಎಂದಿದ್ದಾರೆ ಜೇಠ್ಮಲಾನಿ. ನಿವೃತ್ತರಾದ ಬಗ್ಗೆ ದುಃಖ ವ್ಯಕ್ತಪಡಿಸುವವರೂ, ಜೇಠ್ಮಲಾನಿಯವರ ಈ ವಾಕ್ಯದ ಉತ್ತರಾರ್ಧದ ಬಗ್ಗೆ ನಗೆಯಾಡಬಹುದು! ಏಕೆಂದರೆ ಅವರ ಸುದೀರ್ಘ ವೃತ್ತಿಜೀವನದಲ್ಲಿ ಅವರು ಎಷ್ಟೋ ಭ್ರಷ್ಟರ ಪರವಾಗಿಯೂ ವಾದ ಮಾಡಿದ್ದಾರೆ; ಭ್ರಷ್ಟಾಚಾರ ನಡೆಸಿದ ಪಕ್ಷಗಳ ಸದಸ್ಯರಾಗಿ ಅಧಿಕಾರವನ್ನೂ ಅನುಭವಿಸಿದ್ದಾರೆ. ಹಾಗೆಂದ ಮಾತ್ರಕ್ಕೆ ಅವರ ಕಾನೂನು ಪಾಂಡಿತ್ಯದ ಬಗ್ಗೆ ಮೂಗು ಮುರಿಯಬೇಕಾಗಿಲ್ಲ. ಭಾರತದಲ್ಲಿ ಅತ್ಯಧಿಕ ಶುಲ್ಕ ಪಡೆಯುತ್ತಿರುವ, ಅಂತರರಾಷ್ಟ್ರೀಯ ಕಾನೂನುಗಳ ಬಗ್ಗೆಯೂ ಆಳ ಪಾಂಡಿತ್ಯವುಳ್ಳ ವಕೀಲ ಎನ್ನುವ ಅವರ ಹೆಗ್ಗಳಿಕೆಯನ್ನು ಯಾರೂ ಅಲ್ಲಗಳೆಯಲಾಗದು. 'ದೇಶ ಒಳ್ಳೆಯ ಸ್ಥಿತಿಯಲ್ಲಿಲ್ಲ. ಹಿಂದಿನ ಸರಕಾರ ಮತ್ತು ಈಗಿನ ಸರಕಾರ ಎರಡೂ ಸೇರಿ ದೇಶವನ್ನು ಅಧಃಪತನಕ್ಕೆ ಇಳಿಸಿದೆ' ಎಂದೂ ಅವರು ಹೇಳಿರುವುದು ಬಹುತೇಕ ಒಪ್ಪತಕ್ಕ ಮಾತೇ.

ಈಗಿನ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿರುವ ಶಿಕಾರ್‌ಪುರ್, ಜೇಠ್ಮಲಾನಿ ಹುಟ್ಟೂರು. ಕಲಿತದ್ದೂ ಅಲ್ಲೇ. ಹುಡುಗ ಎಷ್ಟು ಚೂಟಿಯೆಂದರೆ, 13ರ ಎಳವೆಯಲ್ಲೇ ಡಬಲ್ ಪ್ರಮೋಶನ್ ಪಡೆದುಕೊಂಡು ಮೆಟ್ರಿಕ್ಯುಲೇಷನ್ ಪಾಸ್ ಮಾಡಿದ! 17ರ ಹರೆಯದಲ್ಲೇ ಕರಾಚಿಯ ಎಸ್.ಸಿ.ಸಹಾನಿ ಲಾ ಕಾಲೇಜಿನಲ್ಲಿ ಕಾನೂನು ಪದವಿ ಪಾಸಾದ! ಆಗಿನ ಕಾಲದಲ್ಲಿ ಕಾನೂನು ಪದವಿ ಪಡೆಯಲು 21 ವರ್ಷ ವಯಸ್ಸು ಆಗಬೇಕಿತ್ತು. ಈ ಹುಡುಗನಿಗೆ ನೆರವಾಗಲೆಂದು ಸರ್ಕಾರ ವಿಶೇಷ ನಿರ್ಣಯ ಪಾಸ್ ಮಾಡಿತ್ತು.

ಆರಂಭದಲ್ಲಿ ಸಿಂಧ್‌ನಲ್ಲಿ ಕಾನೂನು ಅಧ್ಯಾಪಕರಾಗಿ ಕೆಲಸ ಮಾಡಿದ ಜೇಠ್ಮಲಾನಿ, ಬಳಿಕ ವಯಸ್ಸಿನಲ್ಲಿ ತನಗಿಂತ 7 ವರ್ಷ ದೊಡ್ಡವರಾಗಿದ್ದ ಎ.ಕೆ.ಬ್ರೋಹಿ ಜತೆ ಸೇರಿ ಕರಾಚಿಯಲ್ಲಿ ಕಚೇರಿ ತೆರೆದು ಪ್ರಾಕ್ಟೀಸ್ ಶುರು ಮಾಡಿದರು. ಇಬ್ಬರೂ ನಿಕಟ ಸ್ನೇಹಿತರು. 1948ರಲ್ಲಿ ದೇಶವಿಭಜನೆಯ ಹಿನ್ನೆಲೆಯಲ್ಲಿ ಕರಾಚಿಯಲ್ಲಿ ಹಿಂದೂ–ಮುಸ್ಲಿಂ ಹಿಂಸಾಚಾರ ಭುಗಿಲೆದ್ದಾಗ ಅದೇ ಸ್ನೇಹಿತನ ಸಲಹೆಯಂತೆ ಜೇಠ್ಮಲಾನಿ ಕುಟುಂಬ ಸಮೇತ ಅಲ್ಲಿಂದ ಪಲಾಯನ ಮಾಡಿ ಮುಂಬೈ ಸೇರಿದರು. ಬ್ರೋಹಿ ಕೆಲ ವರ್ಷದ ಬಳಿಕ ಪಾಕಿಸ್ತಾನದ ಕಾನೂನು ಸಚಿವರಾದರು.



ಮುಂಬೈಯಲ್ಲಿ ಪ್ರಾಕ್ಟೀಸ್ ಚೆನ್ನಾಗಿಯೇ ನಡೆಯಿತು. 1959ರಲ್ಲಿ ಕೆ.ಎಂ.ನಾನಾವತಿ ವರ್ಸಸ್ ಸ್ಟೇಟ್ ಆಫ್ ಮಹಾರಾಷ್ಟ್ರ ಮೊಕದ್ದಮೆಯಲ್ಲಿ ಜೇಠ್ಮಲಾನಿ ಮತ್ತು ವೈ.ವಿ ಚಂದ್ರಚೂಡ್ ಜತೆಯಾಗಿ ವಾದ ಮಾಡಿದ್ದರು. (ಬಳಿಕ ಚಂದ್ರಚೂಡ್ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರಾದರು.) 60ರ ದಶಕದಲ್ಲಿ ಕೆಲವು ಕಳ್ಳಸಾಗಣೆದಾರರ ಪರವಾಗಿ ವಾದಿಸಿ ಕೇಸ್ ಗೆದ್ದುಕೊಟ್ಟ ಜೇಠ್ಮಲಾನಿ ಅದಕ್ಕಾಗಿಯೇ ಜನರಿಂದ ತೀವ್ರ ಟೀಕೆಗೊಳಗಾದರು.

ಜೇಠ್ಮಲಾನಿ ಮೂಲತಃ ಕ್ರಿಮಿನಲ್ ಪ್ರಕಾರಗಳ ಮೊಕದ್ದಮೆಗಳನ್ನು ವಾದಿಸುತ್ತಿದ್ದವರು. ಆದರೆ ವಿವಿಐಪಿ ಸಿವಿಲ್ ಕೇಸ್‌ಗಳಲ್ಲೂ ಸಾಕಷ್ಟು ಕೈಯಾಡಿಸಿದ್ದಾರೆ. ತೆರಿಗೆಕಳ್ಳರು, ಕಳ್ಳಸಾಗಣೆದಾರರು, ವಿಐಪಿ ರಾಜಕಾರಣಿಗಳು, ಸೆಲೆಬ್ರಿಟಿಗಳು– ಎಲ್ಲರೂ ಕಾನೂನು ಸಂಕಷ್ಟದಲ್ಲಿ ಸಿಕ್ಕಿದಾಗ ಮೊದಲು ನೆನಪಿಸಿಕೊಳ್ಳುತ್ತಿದ್ದುದೇ ರಾಮ್ ಜೇಠ್ಮಲಾನಿಯವರನ್ನು. 90ರ ದಶಕದಲ್ಲಿ ಭಾರೀ ಸುದ್ದಿ ಮಾಡಿದ ಬಹುಕೋಟಿ ಷೇರು ವಂಚನೆಯ ಹರ್ಷದ್ ಮೆಹ್ತಾ ಪ್ರಕರಣದಲ್ಲೂ ಆರೋಪಿಯ ಪರವಾಗಿ ಜೇಠ್ಮಲಾನಿ ವಾದಿಸಿದ್ದರು. ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ಸರ್ಕಾರವನ್ನು ಬಚಾವ್ ಮಾಡಲು ಕೆಲವು ಸಂಸದರು ಲಂಚ ಪಡೆದು ಮತ ಹಾಕಿದ ಪ್ರಕರಣದಲ್ಲೂ ಇವರದ್ದೇ ವಕಾಲತ್ತು. ಈ ಹಂತದಲ್ಲೇ ಜೇಠ್ಮಲಾನಿ ಅವರನ್ನು 'ಜೂಠ್ಮಲಾನಿ' ಎಂದು ಲೇವಡಿ ಮಾಡುವವರೂ ಹುಟ್ಟಿಕೊಂಡರು! ಅದೇನೇ ಇದ್ದರೂ ಕೋಟಿಗಟ್ಟಳೆ ಹಣ ಕೊಟ್ಟು ಇವರ ಬಳಿ ವಕಾಲತ್ತಿಗೆ ಬರುವವರು ಕಡಿಮೆಯಾಗಲಿಲ್ಲ. ತೀರಾ ಇತ್ತೀಚೆಗೆ ಹಣಕಾಸು ಸಚಿವ ಅರುಣ್ ಜೇಟ್ಲಿ ತಮ್ಮ ವಿರುದ್ಧ ಹೂಡಿದ ಮಾನನಷ್ಟ ಮೊಕದ್ದಮೆಯನ್ನು ಎದುರಿಸಲು ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಕೂಡಾ ಜೇಠ್ಮಲಾನಿ ಮೊರೆ ಹೊಕ್ಕಿದ್ದರು. ಆಗ ಕೇಜ್ರಿವಾಲ್ ಒಪ್ಪಿಕೊಂಡ ಫೀಸು 2 ಕೋಟಿ ರೂಪಾಯಿ!

ರಾಜಕೀಯಕ್ಕೆ ಧುಮುಕಿದ ರಾಮ್ ಜೇಠ್ಮಲಾನಿ ಬಿಜೆಪಿ ಸೇರಿ, ಮುಂಬೈಯಿಂದ ಚುನಾವಣೆಗೆ ನಿಂತು ಎರಡು ಬಾರಿ (6 ಮತ್ತು 7ನೇ ಲೋಕಸಭೆ) ಎಂ.ಪಿ ಯೂ ಆದರು; ಅಟಲ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಕಾನೂನು ಸಚಿವರಾದರು. ಇನ್ನೊಮ್ಮೆ ನಗರಾಭಿವೃದ್ಧಿ ಖಾತೆ ನಿರ್ವಹಿಸಿದರು. ಜೇಠ್ಮಲಾನಿ ಎಂತಹ ಜಿಗುಟು ಮನುಷ್ಯನೆಂದರೆ, ಬಳಿಕ 2004ರಲ್ಲಿ ಪಕ್ಷ ತ್ಯಜಿಸಿ, ಅದೇ ಅಟಲ ಬಿಹಾರಿ ವಾಜಪೇಯಿ ವಿರುದ್ಧ ಲಖನೌದಲ್ಲಿ ಚುನಾವಣೆಗೆ ನಿಂತು ಸೋತರು. ಆರು ವರ್ಷದ ಬಳಿಕ ಮತ್ತೆ ಬಿಜೆಪಿ ಸೇರಿ ರಾಜ್ಯಸಭೆ ಸದಸ್ಯರಾದರು.

18ರ ಹರೆಯದಲ್ಲಿ ಪಾಕಿಸ್ತಾನದಲ್ಲಿ ಇದ್ದಾಗಲೇ ದುರ್ಗಾ ಅವರನ್ನು ಮದುವೆಯಾದ ಜೇಠ್ಮಲಾನಿ, ಆರು ವರ್ಷದ ಬಳಿಕ ವಕೀಲೆ ಸಹಾನಿ ಅವರನ್ನು ಮದುವೆಯಾದರು. ಇಬ್ಬರು ಹೆಂಡಿರಿಂದ ಒಟ್ಟು ನಾಲ್ಕು ಮಕ್ಕಳ ಸುಖ ಸಂಸಾರ. ಅವರಲ್ಲಿ ಮಹೇಶ್ ಜೇಠ್ಮಲಾನಿ ಮತ್ತು ರಾಣಿ ಜೇಠ್ಮಲಾನಿ ಇಬ್ಬರೂ ವಕೀಲರಾಗಿ ಹೆಸರು ಗಳಿಸಿದ್ದಾರೆ. ಬಾರ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷರಾಗಿ ನಾಲ್ಕು ಬಾರಿ ಆಯ್ಕೆ ಆಗಿರುವ ಜೇಠ್ಮಲಾನಿ, ಸುದೀರ್ಘ 76 ವರ್ಷಗಳ ಕಾಲ ವಕಾಲತ್ತು ಮಾಡಿದರೂ ಒಮ್ಮೆಯೂ ನ್ಯಾಯಮೂರ್ತಿ ಹುದ್ದೆಯತ್ತ ಗಮನ ಹರಿಸದೇ ಇರುವುದು ಕುತೂಹಲಕರ ಸಂಗತಿ! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65